**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**S.C. No. 231/2022**

**ಸಾಕ್ಷಿಯನ್ನು ದಿನಾಂಕ 24.11.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಬಸವಣ್ಣಚಾರಿ | ಪಿ.ಡಬ್ಲ್ಯೂ-17 |
| ತಂದೆಯ/ಗಂಡನ ಹೆಸರು | : | ಲೇಟ್ ಸಿದ್ದಚಾರಿ | ಸಿ.ಡಬ್ಲ್ಯೂ-16 |
| ವಯಸ್ಸು | : | 45 | |
| ಉದ್ಯೋಗ | : | ಕಾರ್ಪೆಂಟರ್ | |
| ವಾಸ ಸ್ಥಳ | : | ಬನ್ನೂರು | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ಮೃತ ನಂಜಮ್ಮ ನನ್ನ ತಂದೆಯ ತಮ್ಮನ ಹೆಂಡತಿ ಇರುತ್ತಾರೆ. 3-4 ವರ್ಷದ ಹಿಂದೆ ನಂಜಮ್ಮ ಮರಣ ಹೊಂದಿರುತ್ತಾರೆ. ಈ ಪ್ರಕರಣದ ಆರೋಪಿ ನಂಜಮ್ಮನ ಸೊಸೆ ಇರುತ್ತಾರೆ. ನಂಜಮ್ಮ ಮತ್ತು ಆರೋಪಿತರು ಮೈಸೂರಿನಲ್ಲಿ ವಾಸವಿದ್ದರು, ಆದರೆ ಅವರು ಒಟ್ಟಿಗಿದ್ದರೋ ಬೇರೆ ಬೇರೆ ಇದ್ದರೋ ಗೊತ್ತಿಲ್ಲ. ನನ್ನ ಸ್ನೇಹಿತರ ಪೈಕಿ ಯಾರೋ ಒಬ್ಬರು ನಂಜಮ್ಮ ಮರಣ ಹೊಂದಿರುವ ಬಗ್ಗೆ ಹೇಳಿದಾಗ ನನಗೆ ಆ ಬಗ್ಗೆ ಗೊತ್ತಾಯಿತು. ಆ ಕಾಲಕ್ಕೆ ನಾನು ನಂಜಮ್ಮ ಮರಣ ಹೊಂದಿದ್ದ ಮನೆ ಬಳಿ ಹೋಗುವಷ್ಟರಲ್ಲಿ ನಂಜಮ್ಮನ ಹೆಣ್ಣುಮಕ್ಕಳು, ಅಳಿಯಂದಿರು ಮತ್ತು ಹೆಣ್ಣು ಮಕ್ಕಳ

ಮಕ್ಕಳುಗಳು ಬಂದಿದ್ದರು. ಆ ಕಾಲಕ್ಕೆ ನಂಜಮ್ಮಳ ಶವ ಆ ಮನೆಯ 2 ನೇ ಮಹಡಿಯಲ್ಲಿತ್ತು. ಆಗ ನಂಜಮ್ಮಳಿಗೆ ಎಲ್ಲಿ ಏಟಾಗಿತ್ತು ಎಂದು ನಾನು ನೋಡಿಲ್ಲ. ನಂಜಮ್ಮ ಯಾವ ಕಾರಣಕ್ಕೆ ಮರಣ ಹೊಂದಿರುತ್ತಾರೆ ಎಂದು ಗೊತ್ತಿಲ್ಲ. ನಾನು ನಂಜಮ್ಮಳ ಹೆಣ್ಣು ಮಕ್ಕಳಿಗೆ ಫೋನ್ ಮಾಡಿ ಮರಣದ ಬಗ್ಗೆ ತಿಳಿಸಿಲ್ಲ. ನಾನು ಪೋಲಿಸರಿಗೆ ಹೇಳಿಕೆ ಸಹ ನೀಡಿಲ್ಲ. ನಿಪಿ8 ಮತ್ತು 9 ರಲ್ಲಿ ಕಾಣುವ ಶವ ನಂಜಮ್ಮಳ ಶವ ಇದೆ. ಮೃತ ನಂಜಮ್ಮಳಿಗೂ ಮತ್ತು ಅವರ ಸೊಸೆ ಹಾಗೂ ಮೊಮ್ಮಕ್ಕಳಿಗೂ ಸಂಬಂಧ ಯಾವ ರೀತಿ ಇತ್ತೆಂದು ಗೊತ್ತಿಲ್ಲ. ನಂಜಮ್ಮ ಯಾವ ರೀತಿ ಮರಣ ಹೊಂದಿರುತ್ತಾರೆ ಎಂದು ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ, ಪರಿಶೀಲಿಸಿ ಸಕಾರಣಗಳಿದ್ದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ನಂಜಮ್ಮ ಮತ್ತು ಆರೋಪಿ ಅದೇ ಕಟ್ಟಡದ ಬೇರೆ ಬೇರೆ ಮಹಡಿಯಲ್ಲಿ ವಾಸವಿದ್ದರು ಎಂದರೆ ಗೊತ್ತಿಲ್ಲ. ಆರೋಪಿ ಮತ್ತು ಅವರ ನಂಜಮ್ಮಳ ಯೋಗಕ್ಷೇಮ ನೋಡುತ್ತಿರಲಿಲ್ಲ ಎಂದರೆ ಗೊತ್ತಿಲ್ಲ. ನಂಜಮ್ಮ ತನ್ನ ಹೆಣ್ಣು ಮಕ್ಕಳಿಗೂ ಮನೆಯಲ್ಲಿ ಪಾಲು ಬರಬೇಕೆಂದು ಹೇಳುತ್ತಿದ್ದರಿಂದ ಆರೋಪಿಗೆ ನಂಜಮ್ಮಳನ್ನು ಕಂಡರೆ

ಆಗುತ್ತಿರಲಿಲ್ಲ ಎಂದರೆ ಗೊತ್ತಿಲ್ಲ. ದಿನಾಂಕ 3.10.2021ರಂದು ಮದ್ಯಾಹ್ನ 1 ಗಂಟೆಗೆ ನಾನು ರಂಗನಾಥಪುರದ ವರ್ಕಶಾಪಿನಲ್ಲಿ ಕೆಲಸ ಮಾಡುತ್ತಿರುವಾಗ ಆರೋಪಿಯ ಮಗ ಸಿದ್ದರಾಜು ನನ್ನ ಮೊಬೈಲಿಗೆ ಕರೆ ಮಾಡಿ ಅಜ್ಜಿ ಏಳುತ್ತಿಲ್ಲ, ಡೋರ್ ಲಾಕ್ ಮಾಡಿಕೊಂಡು ಮಲಗಿದ್ದಾರೆ, ನಾನು ಕಿಟಕಿ ಗಾಜು ಹೊಡೆದು ನೋಡಿದೆ, ಅವರು ಮಲಗಿದ್ದಲ್ಲೇ ಮಲಗಿದ್ದಾರೆ ಎಂದು ಹೇಳಿದ ಎಂದರೆ ಸರಿಯಲ್ಲ. ಆಗ ನಾನು ನಂಜಮ್ಮಳ ಹೆಣ್ಣು ಮಕ್ಕಳಾದ ಪದ್ಮ ಮತ್ತಿ ನಾಗಮ್ಮಳಿಗೆ ಪೋನ್ ಮಾಡಿ ಹೋಗಿ ನೋಡಲು ತಿಳಿಸಿದೆ ಎಂದರೆ ಸರಿಯಲ್ಲ. ನಂತರ ನಾನು ಹೋಗಿ ನೋಡಿದಾಗ ನಂಜಮ್ಮಳ ಕತ್ತಿನ ಭಾಗ ಹಾಗೂ ಎದೆಯ ಬಳಿ ತರಚಿದ ಗಾಯವಾಗಿದ್ದು ಹಣೆಯ ಬಲಭಾಗ ಊದಿತ್ತು ಎಂದರೆ ನಾನು ನೋಡಿಲ್ಲ. ಆಗ ಪದ್ಮ ಇವರು ಅದು ಸಹಜ ಸಾವಲ್ಲ ಎಂದು ಅನಿಸಿ ಠಾಣೆಗೆ ಹೋಗಿ ದೂರು ನೀಡಿದ್ದರು ಎಂದರೆ ಗೊತ್ತಿಲ್ಲ. ಆ ಕಾಲಕ್ಕೆ ಪದ್ಮ ಇವರು ನಂಜಮ್ಮಳ ಸೊಸೆ ಮತ್ತು ಮೊಮ್ಮಕ್ಕಳು ಸೇರಿ ಕೊಲೆ ಮಾಡಿರುತ್ತಾರೆ ಎಂದು ದೂರು ನೀಡಿರುತ್ತಾರೆ ಎಂದರೆ ಗೊತ್ತಿಲ್ಲ. ನಂಜಮ್ಮಳನ್ನು ರೂಂನಲ್ಲಿ ಹಾಕಿ ಮರದ ಹಿಟ್ಟಿನ ದೊಣ್ಣೆಯಿಂದ ತಲೆ ಮತ್ತು ಮೈಕೈಗೆ ಹೊಡೆದು ಕೈಕಾಲುಗಳನ್ನು ಕಟ್ಟಿ ನಂತರ ಮುಖಕ್ಕೆ ಪ್ಲಾಸ್ಟಿಕ್ ಕವರನ್ನು ಹಾಕಿ ಉಸಿರುಗಟ್ಟಿಸಿ ಸಾಯಿಸಿದ್ದಾರೆ ಎಂದು ಗೊತ್ತಾಯಿತು ಎಂದರೆ ಸರಿಯಲ್ಲ. ಕೊಲೆ ಮಾಡಿರುವುದು ಗೊತ್ತಾಗಬಾರದೆಂದು ಅವರು ಮುಂದೆಯಿಂದ ಡೋರ್ ಲಾಕ್ ಮಾಡಿ ಕಿಟಕಿಯ ಗಾಜನ್ನು ಒಡೆದು ಡೋರ್ ಲಾಕ್ ಕೀಯನ್ನು ಒಳಗಡೆ

ಎಸೆದಿರುತ್ತಾರೆಂದು ಗೊತ್ತಾಯಿತು ಎಂದರೆ ಸರಿಯಲ್ಲ. ಈ ಬಗ್ಗೆ ದಿನಾಕ 5.10.2020 ರಂದು "ನನ್ನ ಚಿಕ್ಕಮ್ಮ ನಂಜಮ್ಮನವರು ಮೈಸೂರು ನಗರದ -------------------------- ತಮ್ಮ ಮುಂದೆ ತಿಳಿಸಿರುತ್ತೇನೆ" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ25 ಎಂದು ಗುರುತಿಸಿದೆ. ದಿನಾಂಕ 8.10.2021 ರಂದು "ನಂಜಮ್ಮನವರು ಅವರ ಮಗನ ಹೆಂಡತಿ ಮಕ್ಕಳಾದ ನಾಗಮ್ಮ, ಸಿತಾರ ------------------- ತಮ್ಮ ಮುಂದೆ ತಿಳಿಸಿರುತ್ತೇನೆ" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ26 ಎಂದು ಗುರುತಿಸಿದೆ. ಎಲ್ಲ ವಿಷಯ ಗೊತ್ತಿದ್ದರೂ ಸಹ ಆರೋಪಿತರು ನಮ್ಮ ಸಂಬಂಧಿಕರಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ಇಲ್ಲ**

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು